ನನ್ನ ಸಮಯ ಅಂಗೈಯಲ್ಲಿ ಹಿಡಿದಿಟ್ಟುಕೊಂಡ ನೀರಿನಂತೆ, ಗೊತ್ತಾಗದಂತೆ ಜಾರುತ್ತಿತ್ತು. ಕಾಲೇಜಿನಲ್ಲಿ ಮೂರು ನಾಲ್ಕು ಗಂಟೆ ಕೂಗಿ ಕೂಗಿ ಗಂಟಲು ಕಟ್ಟುತ್ತಿತ್ತು. ನಿಂತು ನಿಂತು ಕಾಲು ಸೋತು ಬರುತ್ತಿದ್ದವು. ಸಾಕಷ್ಟು ಸಲ ತಡರಾತ್ರಿಯ ವರೆಗೆ ಕುಳಿತು ಓದು, ನೋಟ್ಸು ಎಂದೆಲ್ಲ ತಲೆ ಕೆಟ್ಟುಹೋಗುತ್ತಿತ್ತು. ಪೇಪರ್ ಚೆಕ್ಕಿಂಗ್ ಇದ್ದರಂತೂ ದೊಡ್ಡ ರಗಳೆಯಾಗುತ್ತದೆ. ಪರೀಕ್ಷೆ ಮುಗಿದ ದಿನದಿಂದ ಕೆಲ ವಿದ್ಯಾರ್ಥಿಗಳು ದಿನಾಲೂ, ''ಮ್ಯಾಮ್ ಪೇಪರ್ ಚೆಕ್ ಮಾಡಿದ್ರೀ?'' ಎಂದು ಮುಗ್ಧವಾಗಿ ನಗೆ ಬೀರುತ್ತ ನನ್ನನ್ನು ಕರ್ತವ್ಯದ ಶೂಲಕ್ಕೆ ಏರಿಸುತ್ತಿದ್ದರು. ಕಾಲೇಜಿನಲ್ಲಿ ವರ್ಷಕ್ಕೆ ಏನಿಲ್ಲವೆಂದರೂ ಹತ್ತಾರು ಫಂಕ್ಷನ್ನುಗಳು. ಅದೇ ಒಂದು ಪ್ರಪಂಚವಾಗಿ, ಹೊರಗಿನ ಪ್ರಪಂಚಕ್ಕೆ ನಾನು ಅಪರಿಚಿತಳಾಗಿಯೇ ಉಳಿದಿದ್ದೆ. ಆದರೆ, ನಯನಾಳ ಪರಿಚಯ ಸ್ನೇಹಕ್ಕೆ ತಿರುಗಿದ ನಂತರ ನನಗೆ ಓಣಿಯ, ಪಕ್ಕದ ಓಣಿಯ ಅನೇಕ ವ್ಯಕ್ತಿಚಿತ್ರಣಗಳು ಸುಲಭವಾಗಿ ದಕ್ಕತೊಡಗಿದವು. ಕೆಲವೊಂದು ಅತಿರಂಜಿತ ಕತೆಗಳು ಎಂದು ಅನಿಸುತ್ತಿದ್ದವು. ''ನೀನು ಉಪ್ಪು ಖಾರ ಹಚ್ಚಿ ಹೇಳುವುದರಲ್ಲಿ ಎತ್ತಿದ ಕೈ, ಬಿಡು'' ಎಂದು ಒಂದೆರಡು ಸಲ ನಕ್ಕಿದ್ದೆ. ''ನಮ್ಮ ಬಾಜೂ ಮನಿ ಆಂಟಿದೂ ಎದರು ಮನೆಯವರ ಡ್ರೈವರದೂ ಕಳ್ಳಾಟ ಭಾಳ ಜೋರ ನಡದಿರ್ತದ, ನೋಡೀ ಇಲ್ಲೋ ಸಂಧ್ಯಕ್ಕಾ?'' ಎಂದು ಹೊಸ ಸಂಬಂಧವೊಂದನ್ನು ಅನಾವರಣಗೊಳಿಸಿಬಿಡುತ್ತಿದ್ದಳು. ಒಮ್ಮೊಮ್ಮೆ ಇವೆಲ್ಲ ಉಸಾಬರಿಗಳಿಂದ ನನಗೆ ಬೇಸರವೇ ಆಗುತ್ತಿತ್ತು. ಪರರ ಉತ್ಖನನದಲ್ಲಿ ನನಗೆ ಅಂಥ ಉತ್ಸಾಹವೂ ಇರಲಿಲ್ಲ. ''ನೀನು ಇಂಥಾ ವಣಾ ಉಸಾಬರಿ ಮಾಡೋದಕ್ಕಿಂತಾ ಎಲ್ಲೆರೆ ಕೆಲಸಾ ಹಿಡದ್ರ ಹತ್ತ ಸಾವಿರ ರೂಪಾಯರೇ ಗಳಸಬಹುದು. ಹೆಂಗೂ ಬಿ.ಕಾಂ. ಮಾಡಿ'' ಎಂದು ನಯನಾಳಿಗೆ ಹೇಳಿದ್ದೆ.

''ಅಯ್ಯ ನಮ್ಮನಿಯವ್ರು ಬಿಡಬೇಕಲಾ! ನೀ ಗಳಿಸಿ ಹಾಕೋದು ಅಷ್ಟರಾಗ ಅದ, ಮನ್ಯಾಗಿದ್ದು ಛಂದಾಗಿ ಮಕ್ಕಳು ಮರಿ ನೋಡಕೊಂಡಿರು ಅಂತಾರ'' ಎಂದು ರಾಗ ಎಳೆದರೂ ಅದರಲ್ಲೂ ಅವಳಿಗೆ ಹೆಮ್ಮೆ ಇದ್ದಿದ್ದು ಗೋಚರಿಸಿತ್ತು. ಅವಳ ಹದ್ದಿನ ಕಣ್ಣಿಗೆ, ಸಿಐಡಿ ಬುದ್ಧಿಗೆ ಏನಿಲ್ಲ ಏನಿದೆ ಎಂಬ ಸಂಗತಿಗಳು ಗೋಚರಿಸುತ್ತಿದ್ದವು. ಅನೈತಿಕ ಸಂಬಂಧಗಳು, ಗಂಡ ಹೆಂಡತಿಯರ ಜಗಳಗಳು, ಓಣಿಯ ಹುಡುಗಿಯರ ಅಫೇರುಗಳು, ಪಡ್ಡೆಹುಡುಗರ ಟೈಂಪಾಸ್ ಅಡ್ಡಾಗಳು, ಹೀಗೆ ಅವಳ ಸುದ್ದಿಯ ಜೋಳಿಗೆಯು ಯಾವಾಗಲೂ ತುಂಬಿತುಳುಕುತ್ತಿತ್ತು. ಮತ್ತದನ್ನು ಉಳಿದವರ ಮುಂದೆ ಒದರಿ ಖಾಲಿ ಮಾಡಿಕೊಳ್ಳುವ ದರ್ದು ಅವಳಿಗಿದ್ದೇ ಇತ್ತು. ಆದರೆ, ನಾನು ಅವಳ ಈ ವಿನಾಕಾರಣ ಉತ್ಸಾಹಕ್ಕೆ ಸಾಕಷ್ಟು ಸಲ ಸೂಜಿ ಚುಚ್ಚಿ ಸುಮ್ಮನಿರಿಸುತ್ತಿದ್ದೆ. ''ನಯನಾ, ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು ಅಂತಾರ. ಅಂಥಾದ್ದರಾಗ ನೀನು ಕಂಡಕಂಡಾವ್ರ ಕ್ಯಾರೆಕ್ಟರ್ ಬಗ್ಗೆ ಸರ್ಟಿಫಿಕೇಟ್ ಕೊಡಲಿಕ್ಕೆ ತುದಿಗಾಲ ಮ್ಯಾಲೆ ನಿಂತಿರ್ತಿ. ಛೊಲೋ ಅಲ್ಲ ಈ ಸ್ವಭಾವ'' ಎಂದು ಅವಳಿಗೆ ತಿಳಿಹೇಳಲು ಪ್ರಯತ್ನಿಸುತ್ತಿದ್ದೆ. ನಾನು ಅಷ್ಟೆಲ್ಲ ಜೋರು ಮಾಡಿದರೂ ಅವಳಿಗೆ ಅದೇನು ವಿಶ್ವಾಸವೋ ನನ್ನ ಬಗ್ಗೆ! ನನಗೇ ವಿಸ್ಮಯವಾಗುವ ರೀತಿಯಲ್ಲಿ ಅವಳು ಮತ್ತೆಮತ್ತೆ ನನ್ನನ್ನೇ ಅರಸಿಕೊಂಡು ಬರುತ್ತಿದ್ದಳು. ಹಾಗಾಗಿ ಅವಳ ಜೊತೆಗಿನ ನನ್ನ ಅನಿವಾರ್ಯ ಸ್ನೇಹ ಸುಖರೂಪವಾಗಿ ಮುಂದುವರೆದೇ ಇತ್ತು. ಅಂಥವಳು ಒಂದು ದಿನ ಈ ಪುಷ್ಪಾಳ ಬಗ್ಗೆ ಹೇಳಿದ್ದನ್ನು ಮಾತ್ರ ಅರಗಿಸಿಕೊಳ್ಳುವುದು ತುಂಬ ಕಷ್ಟವಾಗಿತ್ತು. ''ಅಕಿ ಅಪ್ಪ ತಾನು ದುಡಿಲಾರದ ಹೆಂಡತಿನ್ನ ದಂಧೆಗೆ ಹಚ್ಚಿದ್ದ. ತಾನs ಗಿರಾಕಿನ್ನೂ ಕರಕೊಂಡು ಬರತಿದ್ದ. ನಾವು ಸಣ್ಣಾವರಿದ್ದಾಗ ನೋಡೇವಿ. ಅದಕ್ಕ ನಮ್ಮಮ್ಮ ಅವರ ಮನಿ ಹತ್ರ ಹಾಯಲಿಕ್ಕೆ ಬಿಡತಿರಲಿಲ್ಲ ನಮಗ, ಗೊತ್ತೇನು? ಅಕಿ ದುಡದ ದುಡದ ಸತ್ತಹೋದ್ಲು. ಆಮ್ಯಾಲೆ ಮಗಳ್ನೂ ಅದಕ್ಕs ಹಚ್ಚಿದ, ದರಿದ್ರ ಅಪ್ಪ'' ಅಂತ ಬೈದಿದ್ದಳು. ನಯನಾಳ ಮಾತನ್ನು ನಾನು ಸುಲಭವಾಗಿ ನಂಬುತ್ತಿರಲಿಲ್ಲ. ಆದರೆ, ಪುಷ್ಪಾ ನಮ್ಮ ಮುಂದೆಯೇ ಅನೇಕ ಸಾರಿ ಗಡದ್ದಾಗಿ ಮೇಕಪ್ ಮಾಡಿಕೊಂಡು ಆಟೊ ಏರುವುದನ್ನು ನೋಡಿದ ಮೇಲೆ, ನನಗೆ ಅವಳ ವ್ಯವಸಾಯದ ಬಗ್ಗೆ ನಯನಾ ಹೇಳಿದ್ದೇ ಖರೆ